ಏನು ಹೇಳಿದ್ದಾರೆ. ಈ 12 ತಿಂಗಳು ಏನೇನು ಆಗಿದೆ ಅದನ್ನು ಹೇಳಿದ್ದಾರೆ. ಸಮಯ ಸಿಗಲಿಲ್ಲವೆಂದು ನಮ್ಮಲ್ಲಿ ಅನೇಕ ಜನ ಚರ್ಚೆಯಲ್ಲಿ ಭಾಗವಹಿಸಲಿಲ್ಲ. ಅನೇಕ ವಿಚಾರಗಳನ್ನು ಕಳೆದ ವರ್ಷದ ರಾಜ್ಯಪಾಲರ ಭಾಷಣಕ್ಕೆ ಇವತ್ತಿನ ರಾಜ್ಯಪಾಲರ ಭಾಷಣಕ್ಕೆ ಇರತಕ್ಕ ವ್ಯತ್ಯಾಸವನ್ನು ಇವರ ಸಾಧನೆಯನ್ನು ಹೇಳತಕ್ಕದ್ದು ಸಮಯ ಸಿಗಲಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ : ಕಳೆದ ವರ್ಷದ ರಾಜ್ಯಪಾಲರ ಭಾಷಣಕ್ಕೆ ನಾವೇನು ಸಾಧನೆಗಳನ್ನು ಮಾಡಿದ್ದೇವೆ ಅವುಗಳನ್ನು ಹೇಳುವುದಕ್ಕೆ ಸಮಯ ಇರಲಿಲ್ಲ. ಆ ಪಟ್ಟಿಯನ್ನು ನಿಮಗೆ ಕಳುಹಿಸಿ ಕೊಡುತ್ತೇನೆ. ಅದನ್ನು ಹೇಳುವುದಕ್ಕೆ ಸಮಯ ಇರಲಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ : ನನಗೂ ಅದೇ ಬಂದಿರುವುದು ಸಮಯವಿರಲಿಲ್ಲ. ನಾನೊಂದು ಅಮೆಂಡ್‌ಮೆಂಟ್ ಕಳುಹಿಸಿದ್ದೆ ನಾನು ಅಮೆಂಡ್‌ಮೆಂಟಿಗೋಸ್ಕರ ಬಂದೆ, ಅವರಿಗೆ ಪೆಜಾರಿಟಿ ಇದೆ ಅದು ಬಂದು ಹೊರಟುಹೋಗಿದೆ. ನಾನು ಇರಲಿಲ್ಲ ಹೊರಗೆ ಹೋಗಿದ್ದೆ ಅದು ನನ್ನದೆ ತಪ್ಪು. ನಾನು ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುವುದು ಏನೆಂದರೆ ರೈತರಿಗೆ ಕಳೆದ ಮೂರ್ನಾಲ್ಕು ವರ್ಷಗಳಿಂದ ಸಾಲದ ಮೇಲಿನ ಬಡ್ಡಿಯನ್ನು ರದ್ದುಮಾಡತಕ್ಕ ಸೌಜನ್ಯವನ್ನು ಈ ಸರ್ಕಾರ ತೋರಿಸುತ್ತದೆ ನಾವು ವಿಧಾನಸೌಧದಲ್ಲಿ ಹೋರಾಟ ಮಾಡುತ್ತೇವೆ ಎನ್ನುವ ಭರವಸೆಯನ್ನು ಜನಗಳಿಗೆ ಕೊಟ್ಟಿದ್ದೇವೆ. ನಮ್ಮ ಕಚೆಯಿಂದ ಅನೇಕ ಸದಸ್ಯರು ಈ ವಿಚಾರವನ್ನು ಒತ್ತಾಯ ಮಾಡಿ ಹೇಳಿದ್ದಾರೆ. ಸರ್ಕಾರದ ಮೇಲಿನ ಹೊರೆಯನ್ನು ನಾವು ಅರ್ಥಮಾಡಿಕೊಳ್ಳುತ್ತೇವೆ. ಅದರೂ ಸಹಿತ ನಾವು ನಿಮಗೆ ಒತ್ತಾಯ ಮಾಡುತ್ತಿದ್ದೇವೆ. ನೀವು ಯಾವುದಾದರೂ ಕಾರ್ಯಕ್ರಮವನ್ನು ತೆಗೆದುಕೊಂಡು, ರೈತರ ಸಾಲವನ್ನು ರದ್ದುಮಾಡಿಯೆಂದು ಹೇಳುವುದಿಲ್ಲ, ಕನಿಷ್ಟ ಸಾಲದ ಮೇಲಿನ ಬಡ್ಡಿಯನ್ನು ಸಂಪೂರ್ಣವಾಗಿ ರದ್ದುಮಾಡಿದ್ದೇವೆ ಎನ್ನತಕ್ಕ ಭರವಸೆಯನ್ನು ಕೊಡಬೇಕೆಂದು ಆ ಬಗ್ಗೆ ಮುಖ್ಯ ಮಂತ್ರಿಗಳಿಂದ ಉತ್ತರವನ್ನು ಬಯಸುತ್ತೇನೆ.

ಶ್ರೀ ಪಾಟಾಳ್ ನಾಗರಾಜ್ : ಅವರು ಹೇಳುವುದಿಲ್ಲ, ನಿಮ್ಮ ಸರ್ಕಾರದ ನೀತಿಯನ್ನು ವಿರೋಧಿಸಿ ನಾವು ಸಭೆಯಿಂದ ಹೊರಗಡೆ ಹೋಗುತ್ತೇವೆ ಇದು ಸರಿಯಲ್ಲ.

(ಈ ಹಂತದಲ್ಲಿ ವಿರೋಧಪಕ್ಷದ ಸದಸ್ಯರು ಸಭಾತ್ಯಾಗ ಮಾಡಿದರು)

ರಾಜ್ಯಪಾಲರ ಭಾಷಣದ ವಂದನಾ ನಿರ್ಣಯ

ಉಪಾಧ್ಯಕ್ಷರು : ಪ್ರಸ್ತಾಪ ಏನೆಂದರೆ "ಮಾನ್ಯ ಸದಸ್ಯರಾದ ಶ್ರೀ ಜಿ.ಎಸ್.ಶಿವಸಂಜಪ್ಪ ಮಂಡಿಸಿದ ರಾಜ್ಯಪಾಲರ ಭಾಷಣಕ್ಕೆ ವಂದನಾ ನಿರ್ಣಯವನ್ನು ಸಭೆಯು ಅನುಮೋದಿಸಬೇಕು"

ಪ್ರಸ್ತಾವವನ್ನು ಅಂಗೀಕರಿಸಲಾಯಿತು.

ಉಪಾಧ್ಯಕ್ಷರು : ಈ ಸದನದಲ್ಲಿ ಅಂಗೀಕರಿಸಿದ ವಂದನಾ ನಿರ್ಣಯವನ್ನು ರಾಜ್ಯಪಾಲರಿಗೆ ಕಳುಹಿಸಿ ಕೊಡಲಾಗುವುದು.

ಶಾಸನ ರಚನಾ ಕಾರ್ಯಕಲಾಪಗಳು

ವಿಧೇಯಕಗಳ ಮಂಡನೆ ಹಾಗೂ ಪ್ರಸ್ತಾವ

ಶ್ರೀ ಪಾರ್ವತಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, 1985-86 ಮತ್ತು 1986-87ನೇ ಸಾಲಿಗೆ ನಿಗದಿಯಾ